**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**CC 25/2024** **PW- 1**

ದಿಃ **29.01.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟಿಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಬಿಕಾಂ ಪದವಿ ಪಡೆದ ನಂತರ ಎಮ್ ಬಿ ಎ ಮಾಡಿರುತ್ತೇನೆ. ನಾನು ಬಿಕಾಂ ಪದವಿದರನಾದ ಕಾರಣ ಅಕೌಂಟ್ಸನಲ್ಲಿ ನನಗೆ ಸಾಕಷ್ಟು ಪರಿಣಿತಿ ಇದೆ ಎಂದರೆ ನಿಜ. ನಾನು ಎಮ್ ಬಿ ಎ ಮಾಡಲು ಮಾತ್ರ ಸಾಲ ಪಡೆದುಕೊಂಡಿರುತ್ತೇನೆ. ನಾನು ಬಿಸಿನೆಸ್ ಮ್ಯಾನೇಜಮೆಂಟ ನಲ್ಲಿ ಎಮ್ ಬಿ ಎ ಮಾಡಿರುತ್ತೇನೆ. ಸದರಿ ಎಮ್ ಬಿ ಎ ಪದವಿ ಎರಡು ವರ್ಷದ ಅವಧಿಯ ಕೊರ್ಸ್ ಆಗಿರುತ್ತದೆ. ಶಿಕ್ಷಣ ಸಾಲ ಪಡೆಯಬೇಕಾದರೆ ನಾವು ಪಡೆಯುತ್ತಿದ್ದ ಪದವಿ ಖರ್ಚುವೆಚ್ಚ ಎಷ್ಟು ಎಂಬುದರ ಬಗ್ಗೆ ಶಿಕ್ಷಣ ಸಂಸ್ಥೆಯಿಂದ ಪಡೆದು ಬ್ಯಾಂಕಿನವರಿಗೆ ನೀಡಬೇಕಾಗುತ್ತದೆ ಎಂದರೆ ಸರಿ. ಸದರಿ ಸಾಲದ ಗೊಸ್ಕರ ಜಾಮಿನುದಾರರು ಸಹ ನೀಡಬೇಕಾಗುತ್ತದೆ ಎಂದರೆ ಸಾಕ್ಷಿ ಕೇಳಬೇಕಾಗುತ್ತದೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಸಾಲ ಪಡೆಯುವ ಪೂರ್ವದಲ್ಲಿ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ಸಾಲದ ದಾಖಲೆಗಳಿಗೆ ನಾನು ಒಬ್ಬನೆ ಸಹಿ ಮಾಡಿರುತ್ತೇನೆ ಸದರಿ ಸಾಲಕ್ಕೆ ಯಾರು ಜಾಮೀನುದಾರರು ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬ್ಯಾಂಕಿನವರು ನೇರವಾಗಿ ಶಿಕ್ಷಣ ಸಂಸ್ಥೆಯ ಖಾತೆಗೆ ಶುಲ್ಕದ ಮೊತ್ತವನ್ನು ಜಮಾ ಮಾಡುತ್ತಾರೆ ಎಂದರೆ ನಿಜ. ಸಾಲದ ಮೊತ್ತವನ್ನು ನೇರವಾಗಿ ಶಿಕ್ಷಣ ಸಂಸ್ದೆಯ ಖಾತೆಗೆ ಬ್ಯಾಂಕಿನವರು ಜಮಾ ಮಾಡುತ್ತಿದ್ದ ಕಾರಣ ಅದರಲ್ಲಿ ಹೆಚ್ಚಿಗೆ ಉಳಿದ ಮೊತ್ತವನ್ನು ನಾನು withdraw ಮಾಡುವ ಪ್ರಮೆಯ ಬರುವುದಿಲ್ಲ ಎಂದರೆ ಸಾಕ್ಷಿ ಶುಲ್ಕವನ್ನು ಹೊರತುಪಡಿಸಿದ ಮೊತ್ತ ನಮ್ಮ ಖಾತೆಗೆ ಜಮಾ ಮಾಡುತ್ತಾರೆ ಹಾಗೂ ಅದನ್ನು ನಾವು ಹಿಂಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ಈ ರೀತಿ ಹೆಚ್ಚಿಗೆ ಮೊತ್ತವನ್ನು ನನ್ನ ಶಿಕ್ಷಣ ಸಾಲದಿಂದ ಪಡೆದುಕೊಂಡು ಅದನ್ನು ಆರೋಪಿಗೆ ನೀಡಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

10. ನಾನು ಪಾನಕಾರ್ಡ ಹೊಂದಿರುತ್ತೇನೆ. ನಾನು ಆದಾಯ ತೆರಿಗೆ ಪಾವತಿದಾರನಾಗಿದ್ದೇನೆ. ನನ್ನ ಆದಾಯ ತೆರಿಗೆ ವಿವರಗಳಲ್ಲಿ ಆರೋಪಿಗೆ ನೀಡಿದ ಮೊತ್ತದ ಬಗ್ಗೆ ನೀವು ನಮೂದಿಸಿದ್ದೀರಾ ಎಂದರೆ ಸಾಕ್ಷಿ ಅದನ್ನು ನಾನು ನನ್ನ ಸಿಎ ಯವರಿಗೆ ಕೇಳಬೇಕು ಎಂದು ನುಡಿಯುತ್ತಾರೆ. ನಾವು ನಮ್ಮ ಕುಟುಂಬದ ವ್ಯವಹಾರದ ಬಗ್ಗೆ ಲೆಕ್ಕಪತ್ರ ನಿರ್ವಹಿಸುತ್ತೇವೆ. ನಾನು ಆರೋಪಿಗೆ ಮೊತ್ತ ನೀಡಿದ ಸಮಯದಲ್ಲಿ ಆಸ್ತಿ ತೆರಿಗೆ ಪಾವತಿ ಮಾಡುತ್ತಿರಲಿಲ್ಲ ಅದರ ಮುಂಚೆಯೆ ಅವರಿಗೆ ಮೊತ್ತ ನೀಡಿರುತ್ತೇನೆ ಹಾಗಾಗಿ ಆ ಬಗ್ಗೆ ಆಸ್ತಿ ತೆರಿಗೆ ವಿವರ ದಾಖಲೆಗಳಲ್ಲಿ ಆ ಬಗ್ಗೆ ನಮೂದಿಸಿಲ್ಲ. ನಮ್ಮ ವ್ಯವಹಾರದ ಲೆಕ್ಕಪತ್ರದಲ್ಲಿ ಆರೋಪಿಗೆ ಸಾಲ ನೀಡಿದ ಬಗ್ಗೆ ನಮೂದಿಸಿಲ್ಲ ಸಾಕ್ಷಿ ಮುಂದುವರೆದು ಅದನ್ನು ನಾನು ವೈಯಕ್ತಿಕವಾಗಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ನೀಡಲಾಗಿದೆ ಎಂದು ಹೇಳಲಾದ 4 ಲಕ್ಷ ಮೊತ್ತ ಆದಾಯ ತೆರಿಗೆ ದಾಖಲೆಗಳಲ್ಲಿ ತೋರಿಸದೇ ಇರುವ ಕಾರಣ ಅದು unaccounted ಮೊತ್ತ ಎಂದು ಪರಿಗಣಿಸಲಾಗುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

11. ಆರೋಪಿ 2011 ರಲ್ಲಿ ನಮ್ಮ ತಂದೆ ಜೊತೆ ಮಾಡಿದ ವ್ಯವಹಾರದ ಬಗ್ಗೆ ಆತನಿಗೆ ಗೊತ್ತಾಗುತ್ತದೆ ಎಂಬ ವಿಷಯವನ್ನು ಬಚ್ಚಿಟ್ಟುವ ಉದ್ದೇಶದಿಂದ ಅವರಿಗೆ ಚೆಕ್ ನಗದಿಕರಣಕ್ಕೆ ಸಲ್ಲಿಸುವ ಪೂರ್ವದಲ್ಲಿ ಯಾವದೇ ನೊಟಿಸ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನನನ ಹತ್ತಿರ ದುಡ್ಡು ಕೇಳಿಲ್ಲ ಹಾಗೂ ಕೇಳುವ ಪ್ರಸಂಗ ಬರಲಿಲ್ಲ ಹಾಗೂ ನಾನು ಅವರಿಗೆ ಯಾವದೇ ದುಡ್ಡು ನೀಡಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**(**ಶ್ರೀಮತಿ ದೀಪಾ ಜಿ ಮನೇರಕರ**)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.